ಓ ಎಸ್ ನಂ. 46/2021 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಹೆಚ್ ಕೆ ಸುಪ್ರಭಾ

ದಿನಾಂಕ 17-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಎಸ್ ಡಿ ವಕೀಲರಿಂದ.

1) ದಿನಾಂಕ 27.10.1987 ರಂದು ಪ್ರತಿವಾದಿ ನಂ.1,3,4 ಮತ್ತು 5 ರವರು ಸೇರಿ ವಿಜೇಂದ್ರ ಎಂಬುವವರಿಗೆ (ವಾದಿಯ ವೆಂಡರ್) ಮಾರಾಟ ಮಾಡಿದ ನೋಂದಾಯಿತ ಮೂಲ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

2) ದಾವಾ ಸ್ವತ್ತಿಗೆ ಸಂಬಂದಪಟ್ಟ ಎರಡು ಡಿಮ್ಯಾಂಡ್ ರಿಜಿಸ್ಟರ್ ಪ್ರತಿಯನ್ನು ಅವುಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು.

3) ನಾಲ್ಕು ಕಂದಾಯ ರಶೀದಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು.

4) ಎರಡು ಇ ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು.

5) ಎರಡು ಪೋಟೊಗಳನ್ನು ಹಾಗೂ ಅದಕ್ಕೆ ಸಂಬಂದಿಸಿದ ಸಿ ಡಿ ಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 10 ರಿಂದ 13 ಎಂದು ಗುರುತಿಸಲಾಯಿತು.

6) ದಿಃ 18.03.2016 ರಂದು ವಕೀಲರ ಮೂಲಕ ಸರ್ಕಾರಕ್ಕೆ ಹಾಗೂ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಪಿ ಡಿ ಒ ರವರಿಗೆ ನೀಡಿದ ನೋಟಿಸಿನ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 14 ಎಂದು ಗುರುತಿಸಲಾಯಿತು.

7) ಅದಕ್ಕೆ ಸಂಬಂದಿಸಿದ ನಾಲ್ಕು ಅಂಚೆ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 15 ರಿಂದ 18 ಎಂದು ಗುರುತಿಸಲಾಯಿತು.

8) ಎರಡು ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 19 ಮತ್ತು 20 ಎಂದು ಗುರುತಿಸಲಾಯಿತು.

9) ಎರಡು ಪೋಸ್ಟಲ್ ಟ್ರ್ಯಾಕ್ ವರದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 21 ಮತ್ತು 22 ಎಂದು ಗುರುತಿಸಲಾಯಿತು.

10) ದಿಃ 05.04.2016 ರಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ , ಜಿಲ್ಲಾ ಪಂಚಾಯಿತಿ, ಮೈಸೂರು ರವರು ಕೆ ಆರ್ ನಗರದ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಬರೆದ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 23 ಎಂದು ಗುರುತಿಸಲಾಯಿತು.

11) ದಿಃ 29.04.2016 ರಂದು ಕೆ ಆರ್ ನಗರ ತಾಲ್ಲೂಕು ಪಂಚಾಯಿತಿ ರವರು ಹೊರಡಿಸಿದ ಜ್ಞಾಪನವನ್ನು ಹಾಜರು ಪಡಿಸಿದದ್ದು ಅದನ್ನು ನಿಪಿ 24 ಎಂದು ಗುರುತಿಸಲಾಯಿತು,

12) ದಿಃ 17.03.2014 ರಂದು ಆಂದೋಲನ ದಿನ ಪತ್ರಿಕೆಯಲ್ಲಿ ಹೊರಡಿಸಲಾದ ಸಾರ್ವಜನಿಕ ಪ್ರಕಟಣೆಯ ಪತ್ರಿಕೆಯನ್ನು ಹೊರಡಿಸಲಾಗಿದ್ದು ಅದನ್ನು ನಿಪಿ 25 ಎಂದು ಗುರುತಿಸಲಾಯಿತು.

13) ಒಂದು ಕಂದಾಯ ರಶೀದಿ ಹಾಗೂ ಒಂದು ಇ ಸಿ ಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 26 ಮತ್ತು 27 ಎಂದು ಗುರುತಿಸಲಾಯಿತು.

14) ದಿಃ 24.08.1979 ರಂದು ತಹಶೀಲ್ದಾರ ಕೆ ಆರ್ ನಗರ ರವರು ಮಾಡಿದ ಆದೇಶವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 28 ಎಂದು ಗುರುತಿಸಲಾಯಿತು.

15) ದಾವಾ ಸ್ವತ್ತಿಗೆ ಸಂಬಂದಪಟ್ಟ ಭೂಮಿ ಅರ್ಜಿ ಸ್ವೀಕೃತಿಯನ್ನು ಹಾಗೂ ಒಂದು ನಕ್ಷೆಯನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ 29 ಮತ್ತು 30 ಎಂದು ಗುರುತಿಸಲಾಯಿತು.

16) ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ರವರು ನೀಡಿದ ಆದೇಶದ ಪ್ರತಿಯನ್ನು ನಿಪಿ 31 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರ ಕೋರಿಕೆಯ ಮೇಲೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.